# ಲಕ್ಷ ಬೆಲೆಯ ಡಿಸೈನರ್ ಸೀರೆ

ಮದುವೆಯ ಸೀರೆಯೆ ಭರ್ಜರಿ ಸೀರೆ ಎನ್ನುವ ಕಾಲವೀಗ ಹೋಯಿತು. ಲಲನೆಯರ ಲಕ್ಷ್ಯವೆಲ್ಲ ತಮ್ಮ ಸೀರೆಯೆಡೆಗೆ ಇರಲಿ ಎಂದು ಬಯಸುವವರು ಲಕ್ಷ ಲಕ್ಷ ರೂಪಾಯಿ ಸುರಿಯುತ್ತಾರೆ ಒಂದೇ ಸೀರೆಗೆ... ಆದ್ದೂರಿ ಸೀರೆಗಳ ಲೋಕದಲ್ಲೊಂದು ಸುತ್ತು..

■ ರಶ್ಮಿ ಎಸ್.



ಚಿತ್ರ: ಸಖಿ ಕಲೆಕ್ಷನ್ಸ್

'ರೇಷ್ಮಿ ಇಳಕಲ್ ಸೀರಿಯೊಳಗ ಬಂಗಾರ ಬಣ್ಣದ ಅಂಚು ಸೆರಗು ಇದ್ರ ಅದೇ ಬಂಗಾರದಂಥ ಸೀರಿ ಅನಸ್ತಿತ್ತು. ಆದ್ರ ಈಗ ಬಂಗಾರದ ಜರಿನೆ ಇರೂ ಸೀರಿ ಇದ್ರೂ ಇನ್ನಾ ಏನೋ ಕಡಿಮಿ ಅನಸ್ತದ..'

ಇಂಥ ಮನಃಸ್ಥಿತಿ ಇರುವವರಿಗಾಗಿ ಹಲವಾರು ಸೀರೆ ವಿನ್ಯಾಸಕರು ಅಪ್ಪಟ ಬೆಳ್ಳಿ ಜರಿಯೊಂದಿಗೆ ಪರಿಶುದ್ಧ ಚಿನ್ನವನ್ನು ಸೇರಿಸಿ ಜರಿಯನ್ನು ಸಿದ್ಧಪಡಿಸುತ್ತಾರೆ. ಕೇವಲ ಚಿನ್ನದ ಜರಿಯನ್ನು ಹೆಣೆಯುವುದು ಕಷ್ಟ!

ಜರ್ದೋಸಿ ಕುಸುರಿ ಕಲೆಗೆ ಬೆಳ್ಳಿ ಬಾಗಿದಂತೆ ಚಿನ್ನ ಬಾಗುವುದಿಲ್ಲ. ಎರಡೂ ಮೆದು ಲೋಹಗಳೇ ಆದರೂ ಬಾಳಿಕೆಗೆ ಬೆಳ್ಳಿಯೇ ಒಳಿತು ಎನ್ನುವುದು ನೇಕಾರರ ಮಾತು.

ಚಿನ್ನ ಮತ್ತು ಬೆಳ್ಳಿ ಬೆಲೆಗಳು ಮುಗಿಲು ಮುಟ್ಟುತ್ತಿದ್ದರೆ ಈ ಸೀರೆಯ ಬೆಲೆಗಳೂ ಗಗನಮುಖಿಯಾಗುತ್ತಿವೆ. ಆದರೆ ಇವುಗಳಿಗೆ ಮರು ಮೌಲ್ಯ ಇರುವುದರಿಂದ ಕೊಂಡವರಿಗೆ ಮೋಸವಿಲ್ಲ.

ಕೆಎಸ್ಐಸಿ ಸೀರೆಗಳಲ್ಲಿ ಶೇ 65ರಷ್ಟು ಬೆಳ್ಳಿಯನ್ನು ಬಳಸಿದರೆ ಶೇ 0.65ರಷ್ಟು ಚಿನ್ನವನ್ನು ಬಳಸಲಾಗುತ್ತದೆ ಎಂದು ಕೆಎಸ್ಐಸಿ ವೆಬ್ ತಾಣದಲ್ಲಿ ಹೇಳಿಕೊಂಡಿದೆ. ಮದುವೆ ಸೀರೆಗಳ ಸಂಗ್ರಹದಲ್ಲಿ 78 ಸಾವಿರ ರೂಪಾಯಿ ಮೌಲ್ಯದ ಸೀರೆಯೇ ಅತಿಹೆಚ್ಚು ಮೌಲ್ಯ ಉಳ್ಳದ್ದಾಗಿದೆ. ಇನ್ನೂ ಹೆಚ್ಚಿನ ಬೆಲೆಯ ಸೀರೆ ಬೇಕಿದ್ದರೆ ಕೆ.ಎಸ್.ಐ.ಸಿ ಶೋರೂಮ್‌ಗಳಿಗೆ ಭೇಟಿ ನೀಡಿ ಚರ್ಚಿಸಬಹುದಾಗಿದೆ.

ಕೆಲವು ಸೀರೆ ಮಳಿಗೆಗಳಲ್ಲಿ ಒಂದು ಲಕ್ಷ, ಒಂದೂವರೆ ಲಕ್ಷ, 3 ಲಕ್ಷ ರೂಪಾಯಿ ಬೆಲೆಯ ಸೀರೆಗಳೂ ಲಭ್ಯ. ಕಂಚಿ ಸೀರೆಯಲ್ಲಿ ಈ ಮಾದರಿಯ ಜರಿಯ ದರ್ಬಾರೇ ಜೋರಿನದು.

ಈ ಕೈಗೆಟುಕದ ಸೀರೆಗಳನ್ನು ಬಿಟ್ಟು, ಇವುಗಳದ್ದೇ ಪ್ರತಿರೂಪ ಅಥವಾ ಹೊಂಬಣ್ಣದ ಮಿನುಗು, ಬೆಳ್ಳಿಯ ಮಿಂಚು ಎರಡೂ ಇರುವ ಸೀರೆ ಬೇಕಿದ್ದರೆ ಡಿಸೈನರ್ ಸೀರೆಗಳನ್ನು ಆಯ್ದುಕೊಳ್ಳಬಹುದು.

ಬೆಂಗಳೂರು ಮೂಲದ 'ಸಖಿ' ಸಂಗ್ರಹದಲ್ಲಿ ಇಂಥ ಸೀರೆಗಳು, 15ರಿಂದ 25 ಸಾವಿರ ರೂಪಾಯಿಗಳ ಶ್ರೇಣಿಯಲ್ಲಿ ಲಭ್ಯ ಇವೆ. ಬಸವ ಅಂಬರ ಮಳಿಗೆಯಲ್ಲಿ ಕೈ ಕಸೂತಿ ಕೆಲಸವಿರುವ 'ತಾವರೆ' ಸಂಗ್ರಹವೂ 3,500 ರೂಪಾಯಿಗಳಿಂದ ಆರಂಭವಾಗುತ್ತದೆ.

ಇಷ್ಟಕ್ಕೂ ಯಾಕೆ ಬೇಕು ಡಿಸೈನರ್ ಸೀರೆ?

ಮದುವೆಯ ಸೀರೆಗೆ ಮದುವೆಯಷ್ಟೇ ಮಹತ್ವ ನೀಡಲಾಗಿದೆ. ಇದೀಗ ಎಲ್ಲರಿಗೂ ತಮ್ಮ ಮದುವೆಯ ಸೀರೆ ಭಿನ್ನವಾಗಿರಬೇಕು. ಅಂಥದ್ದು ಇನ್ನೊಂದು ಸೀರೆ ಇರಬಾರದು ಎಂಬ ಮನಃಸ್ಥಿತಿ ಬೆಳೆಯುತ್ತಿರುವುದರಿಂದಲೇ ಡಿಸೈನರ್ ಸೀರೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಒಮ್ಮೆ ಒಂದು ಸೀರೆ ವಿನ್ಯಾಸಗೊಂಡರೆ, ಇನ್ನೊಂದು ಅದೇ ಬಗೆಯ ಸೀರೆ ಸಿಗುವುದೇ ಇಲ್ಲ. ನಿಮ್ಮ ಸಂಗ್ರಹದ ಸೀರೆ, ನಿಮ್ಮದೇ ಅಮೂಲ್ಯ ಸಂಗ್ರಹವಾಗುತ್ತದೆ. ಇದೊಂದು ಕಾರಣ. ಇನ್ನೊಂದು, ವಿನ್ಯಾಸಕರೊಂದಿಗೆ ಚರ್ಚಿಸಿ ಸೀರೆ ಸಿದ್ಧಪಡಿಸುವ ಅವಕಾಶವೂ ದೊರೆಯುವುದರಿಂದ ಡಿಸೈನರ್ ಸೀರೆಗಳಿಗೆ ಹೆಚ್ಚಿನ ಮಹತ್ವ ದೊರೆಯುತ್ತಲಿದೆ.

ವಸ್ತ್ರ ವಿನ್ಯಾಸಕಿ ಏನು ಹೇಳುತ್ತಾರೆ?

ತಾವರೆ ಸಂಗ್ರಹದ ವಸ್ತ್ರ ವಿನ್ಯಾಸಕಿ ನಿಶಾ ದೀಪಕ್ ಕೈಕಸೂತಿಯಲ್ಲಿ ಪ್ರವೀಣೆ. ಅವರ ಪ್ರಕಾರ ಸೀರೆಗಳು ನಿಮ್ಮ ಅಭಿಮಾನವಾಗಿರುವಂತೆಯೇ ನಿಮ್ಮ ಅಸ್ಮಿತೆಯನ್ನೂ ಎತ್ತಿ ತೋರುವಂತಿರಬೇಕು. ಹಾಗಾಗಿ ಸಾಂಪ್ರದಾಯಿಕ ವಿನ್ಯಾಸಗಳಾದ ಬದಾಮಿ, ಹೂ ಬಳ್ಳಿ ಹಾಗೂ ಗೋಪುರದ ಅಂಚುಗಳು ಹೆಚ್ಚು ಜನರನ್ನು ಸೆಳೆಯುತ್ತವೆ. ನಿಮ್ಮ ಅಭಿರುಚಿಯನ್ನು ಬಿಂಬಿಸುವ ಸೀರೆಗಳನ್ನು ಡಿಸೈನರ್ ಸಂಗ್ರಹದಲ್ಲಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

## ಟ್ರೆಂಡ್ ಏನಿದೆ?

ಸಖಿ ಮಳಿಗೆಯ ಪ್ರಕಾರ ಇತ್ತೀಚಿನ ಟ್ರೆಂಡ್ ರೇಶ್ಮೆ ಸೀರೆಗೆ ಮಾತ್ರ ಸೀಮಿತವಾಗಿಲ್ಲ. ಹಗುರವೆನಿಸುವ ಜಾರ್ಜೆಟ್, ಟಸ್ಸರ್ ಹಾಗೂ ನೆಟ್ ಸೀರೆಗಳತ್ತಲೂ ಒಲವು ಬೆಳೆಯುತ್ತಿದೆ. 'ಕಲಂಕಾರಿ' ಕೆಲಸ ಹಾಗೂ ಕಸೂತಿ ಕೆಲಸಕ್ಕೂ ಜನಪ್ರಿಯತೆ ಹೆಚ್ಚುತ್ತಿದೆ.

ಕಂಚಿ ಸೀರೆಗಳಲ್ಲಿ ಪಲ್ಲಕ್ಕಿ, ಕೃಷ್ಣ ರಾಧೆಯರು, ಬಾಲಕೃಷ್ಣನ ಚಿತ್ರಗಳಿರುವ ಸೀರೆಗಳು ಗಮನಸೆಳೆಯುತ್ತಿವೆ.

■